ಶೈಲಜಾ ಮೆನನ್

# ಓದಿನ ಗಿಡಕೆ 'ಕಥಾವನ'ದ ನೀರು



**ಕಥಾವನದಲ್ಲಿ ಇಂದು**

10.30ಕ್ಕೆ ಉದ್ಘಾಟನೆ. 11ಕ್ಕೆ 'ಓದುಗರಾಗಿ ಶಿಕ್ಷಕರು' ವಿಷಯದ ಕುರಿತು ಸಂವಾದ. 11.30ಕ್ಕೆ ಗುಂಪು ಚರ್ಚೆ. ಕನ್ನಡ ಮತ್ತು ಇಂಗ್ಲಿಷ್ ಸಣ್ಣ ಕತೆಗಳ ಓದು. 1.45 ಸಮುದಾಯ ಸಂವಾದ. 3.30ಕ್ಕೆ ಸಮಾರೋಪ. ಸ್ಥಳ: ಸೆಮಿನಾರ್ ಹಾಲ್, 10ನೇ ಮಹಡಿ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ. ಪಿಕ್ಸೆಲ್‌ಪಾರ್ಕ್, ಬಿ ಬ್ಲಾಕ್, ಎಲೆಕ್ಟ್ರಾನಿಕ್ಸ್ ಸಿಟಿ. ಹೊಸೂರು ರಸ್ತೆ.

ಮಕ್ಕಳ ಶಿಕ್ಷಣದಲ್ಲಿ ಸಾಹಿತ್ಯ ಮಹತ್ವದ ಪಾತ್ರ ವಹಿಸುತ್ತದೆ. ಸಾಹಿತ್ಯದ ಓದು ಮಕ್ಕಳಲ್ಲಿ ಕಲ್ಪನಾಶಕ್ತಿಯನ್ನು ಹೆಚ್ಚಿಸುತ್ತದೆ. ಬದುಕಿನ ಅನೇಕ ಘಟ್ಟಗಳಿಗೆ ಮುಖಾಮುಖಿಯಾಗುವಲ್ಲಿ ಸಾಹಿತ್ಯ ಒದಗಿಸುವ ಮಾನಸಿಕ ಬೆಂಬಲ ತುಂಬ ಮಹತ್ವದ್ದು.

ಶಿಕ್ಷಕರು ಪಠ್ಯಕ್ರಮದಲ್ಲಿ ಸಾಹಿತ್ಯವನ್ನು ಬಳಸಿದಾಗ, ಸಂಕೀರ್ಣ ಸಮಸ್ಯೆಗಳ ಕುರಿತು ಓದುವ, ಬರೆಯುವ, ಚರ್ಚಿಸುವ, ಪ್ರತಿಕ್ರಿಯಿಸುವ ಕೌಶಲವನ್ನು ಮೈಗೂಡಿಸಿಕೊಳ್ಳುತ್ತಾರೆ.

ದುರದೃಷ್ಟವಶಾತ್, ಬಹುತೇಕ ಭಾರತೀಯ ಶಾಲೆಗಳಲ್ಲಿ ಸಾಹಿತ್ಯ ಅಂಥ ಮಹತ್ವದ ಪಾತ್ರ ವಹಿಸಿಲ್ಲ. ಅಲ್ಲದೇ ಪಠ್ಯಕ್ರಮದಲ್ಲಿ ಇರುವ ಸಾಹಿತ್ಯ ವಿಷಯಗಳನ್ನೂ ಸಮರ್ಥವಾಗಿ ಕಲಿಸಲಾಗುತ್ತಿಲ್ಲ.

ಮೌಖಿಕವಾಗಿ ಮತ್ತು ಅಭಿನಯದ ಮೂಲಕ ಕಥೆ ಹೇಳುವ ಸಂಪ್ರದಾಯಗಳು ನಿಧಾನವಾಗಿ ನಗರದ ವಿಭಕ್ತ ಕುಟುಂಬಗಳ ದೈನಂದಿನ ಜೀವನದಿಂದ ಕಣ್ಮರೆಯಾಗುತ್ತಿವೆ.

ಶಾಲೆಗಳು ಮತ್ತು ಶಿಕ್ಷಕರು ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ಸಾಹಿತ್ಯ ಲಭ್ಯವಾಗುವಂತೆ ಮಾಡುವುದು ಮತ್ತು ಅವರು ಅದರ ಓದಿನಲ್ಲಿ ತಲ್ಲೀನವಾಗುವಂತೆ ಶಿಕ್ಷಣ ಕ್ರಮವನ್ನು ಬದಲಿಸಿಕೊಳ್ಳುವುದು ಅವಶ್ಯಕ.

ಆದರೆ ಈ ಜವಾಬ್ದಾರಿ ಹೊರಲು ಶಾಲೆಗಳು ಮತ್ತು ಶಿಕ್ಷಕರು ಎಷ್ಟರ ಮಟ್ಟಿಗೆ ಸನ್ನದ್ಧರಾಗಿದ್ದಾರೆ? ತಮ್ಮ ಬದುಕಿನಲ್ಲಿ ಸಾಹಿತ್ಯದ ಸಂಸರ್ಗವನ್ನೇ ಹೊಂದಿರದ ಶಿಕ್ಷಕರು ಮಕ್ಕಳ ಜೀವನದಲ್ಲಿ ಅದರ ಪ್ರಭಾವ ತರಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಪಾಠ ಮಾಡುವಾಗ ಸಾಹಿತ್ಯವನ್ನು ಹೇಗೆ ಅಳವಡಿಸಿಕೊಳ್ಳಬೇಕು ಮತ್ತು ಅದನ್ನು ಪರಿಣಾಮಕಾರಿಯಾಗಿ ಹೇಗೆ ಕಲಿಸಬೇಕು ಎಂಬ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಷನ್ 'ಕಥಾವನ 2015' ಎಂಬ ಮೂರು ದಿನದ ಸಾಹಿತ್ಯ ಉತ್ಸವವನ್ನು ಆಯೋಜಿಸಿದೆ. ಇದರಲ್ಲಿ 'ಓದುಗರಾಗಿ ಶಿಕ್ಷಕರು' ಎಂಬ ಭಿತ್ತಿಯ ಅಡಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## ಕಥಾವನದ ಹಿನ್ನೆಲೆ

2012ರಲ್ಲಿ ಪ್ರಾರಂಭಗೊಂಡ ಕಥಾವನ-ಮಕ್ಕಳ ವಾರ್ಷಿಕ ಸಾಹಿತ್ಯೋತ್ಸವ. ಈ ದ್ವಿಭಾಷಾ ಸಾಹಿತ್ಯೋತ್ಸವದಲ್ಲಿ ಪ್ರತಿ ವರ್ಷವೂ ಮಕ್ಕಳ ಸಾಹಿತ್ಯದ ಜಗತ್ತನ್ನು ಅನ್ವೇಷಿಸಲು ಮಕ್ಕಳು, ಕತೆಗಾರರು, ಪ್ರಕಾಶಕರು, ಶಿಕ್ಷಕರು, ಶಿಕ್ಷಣತಜ್ಞರು ಮತ್ತು ಇತರ ಶಿಕ್ಷಣ ಕಾರ್ಯಕರ್ತರು ಒಟ್ಟಿಗೆ ಸೇರುತ್ತಾರೆ.

ಕಥಾವನ- ಮಕ್ಕಳ ಸಾಹಿತ್ಯೋತ್ಸವ ಸರ್ಕಾರಿ ಶಾಲೆಗಳನ್ನು ಅಥವಾ ಕಡಿಮೆ ಶುಲ್ಕದ ಖಾಸಗಿ ಶಾಲೆಗಳ ಮಕ್ಕಳ ಮತ್ತು ಶಿಕ್ಷಕರನ್ನು ತಲುಪುವ ಪ್ರಮುಖ ಉದ್ದೇಶವನ್ನು ಹಿನ್ನೆಲೆಯಾಗಿ ಇರಿಸಿಕೊಂಡಿದೆ. ಇಂಗ್ಲಿಷ್‌ನ ಜೊತೆಜೊತೆಗೆ ಕನ್ನಡ ಸಾಹಿತ್ಯದ ವೈಶಿಷ್ಟ್ಯವನ್ನೂ ಈ ಶಾಲಾ ಮಕ್ಕಳಿಗೆ ಪರಿಚಯಿಸುವುದಕ್ಕೆ ಹಾಗೂ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರೇರೇಪಿಸುವ ಉದ್ದೇಶ ಹೊಂದಿದೆ.

ಕಥಾವನ ತಂಡವು ತನ್ನ ಹಿಂದಿನ ವರ್ಷಗಳ ಅನುಭವದಿಂದ ಶಿಕ್ಷಕರಲ್ಲಿ ವಾಚನಾಭಿರುಚಿ ಬೆಳೆಸಬೇಕಾದ ಮಹತ್ವವನ್ನು ಮನಗಂಡಿದೆ. ಹಾಗಾಗಿ ತಂಡದ ಸದಸ್ಯರು ಶಿಕ್ಷಕರೊಂದಿಗೆ ಆರೆಂಟು ತಿಂಗಳ ದೀರ್ಘ ಕಾಲದ ಯೋಜನೆಯನ್ನು ರೂಪಿಸಿಕೊಂಡಿದ್ದಾರೆ. ಈ ಯೋಜನೆಯು ಉತ್ಸವದಲ್ಲಿ ವಿಧ್ಯುಕ್ತವಾಗಿ ಆರಂಭವಾತ್ತದೆ. ಅದರಲ್ಲಿ ಮೊದಲೇ ಆಯ್ಕೆಯಾದ ಬದ್ಧ ಶಿಕ್ಷಕರ ಒಂದು ಸಣ್ಣ ಗುಂಪು ಸಾಹಿತ್ಯ ಮತ್ತು ಅದರ ಪಲುಕು-ಪದರಗಳನ್ನು ಅನ್ವೇಷಿಸಲು ಒಡಗೂಡುತ್ತದೆ. ಅವರು ಮುಂದಿನ ಆರು ತಿಂಗಳಲ್ಲಿ ತಿಂಗಳಿಗೊಮ್ಮೆ ಅರ್ಧ ದಿನ ಕಥಾವನದ ಸದಸ್ಯರು ಕಲೆತು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದ ಸಣ್ಣ ತುಣುಕುಗಳನ್ನು ಓದಲು ಮತ್ತು ಚರ್ಚಿಸಲು ತೊಡಗುತ್ತಾರೆ. ಈ ತುಣುಕುಗಳು ಸಣ್ಣಕಥೆಗಳು ಮತ್ತು ಪ್ರೌಢ ಕವಿತೆಗಳು ಕಾವ್ಯವಾಚನ ಹಾಗೂ ಮಕ್ಕಳ ಸಾಹಿತ್ಯದ ಆಯ್ದ ಭಾಗಗಳ ವಾಚನವನ್ನು ಒಳಗೊಂಡಿರುತ್ತದೆ.

> ಶಿಕ್ಷಕರಲ್ಲಿ ಓದುವ ಹವ್ಯಾಸ ಬೆಳೆಸುವ ಉದ್ದೇಶದಿಂದ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ 'ಕಥಾವನ 2015' ಹೆಸರಿನಲ್ಲಿ ಸಾಹಿತ್ಯೋತ್ಸವ ಆಯೋಜಿಸಿದೆ.

## ವಾಚನಾಭಿರುಚಿ ಬೆಳೆಸುವ ಉದ್ದೇಶ

ಈ ಕಾರ್ಯಕ್ರಮದ ಉದ್ದೇಶ ಶಿಕ್ಷಕರು ತಮ್ಮ ಪಠ್ಯಗಳಲ್ಲಿ ಸಾಹಿತ್ಯವನ್ನು ಹೇಗೆ ಬಳಸಬೇಕೆಂದು ಕಲಿಸುವುದಲ್ಲ. ಬದಲಿಗೆ ಶಿಕ್ಷಕರಲ್ಲಿ ವಾಚನಾಭಿರುಚಿಯನ್ನು ಉದ್ದೀಪನಗೊಳಿಸಿ ಅರ್ಥಪೂರ್ಣವಾದ ಸಾಹಿತ್ಯ ಸಂಸರ್ಗದಿಂದ ತಮ್ಮ ಜ್ಞಾನ ಮತ್ತು ಕೌಶಲ ಹೆಚ್ಚಿಸಿಕೊಳ್ಳುವಂತೆ ಮಾಡುವುದಾಗಿದೆ.

## ಎಲ್ಲೆಲ್ಲಿ ಏನೇನು?

ಈ ಉತ್ಸವವು ಸೆಪ್ಟೆಂಬರ್ 9ರಿಂದ 11ರವರೆಗೆ ನಿಗದಿತ ಸ್ಥಳಗಳಲ್ಲಿ ನಡೆಯಲಿದೆ. ಅವುಗಳಲ್ಲಿ ಮಕ್ಕಳ ಪುಸ್ತಕ ಪ್ರದರ್ಶನ, ಮಕ್ಕಳಿಗೆ ಕಥೆ ಹೇಳುವುದು, ಸೂತ್ರ ಗೊಂಬೆಯಾಟ ಮತ್ತು ಮಕ್ಕಳ ಹಾಗೂ ಶಿಕ್ಷಕರ ನಡುವೆ ಪರಸ್ಪರ ಸಂವಾದದ ಕಾರ್ಯಕ್ರಮಗಳು ಇರುತ್ತವೆ.

ಇಂದು (ಸೆಪ್ಟೆಂಬರ್ 9) 'ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ 'ಹೂ ಈಸ್ ಎ ಗುಡ್ ರೀಡರ್?' ಎಂಬ ಹೆಸರಿನಲ್ಲಿ ಸಂವಾದ, ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಸೆಪ್ಟೆಂಬರ್ 10ರಂದು ಸರ್ಜಾಪುರದ ಸರ್ದಾರ ವಲ್ಲಭಭಾಯಿ ಪಟೇಲ್ ಸ್ಕೂಲ್ ಗ್ರೌಂಡ್‌ನಲ್ಲಿ ಮಕ್ಕಳ ಸಾಹಿತ್ಯೋತ್ಸವ ನಡೆಯಲಿದೆ. ಸೆಪ್ಟೆಂಬರ್ 11ರಂದು ಸರ್ಜಾಪುರದ ಸರ್ಕಾರಿ ಹುಡುಗರ ಪ್ರೌಢಶಾಲೆಯಲ್ಲಿ 'ಟೀಚರ್ಸ್ ಪ್ರೊಫೆಶನಲ್ ಡೆವಲೆಪ್‌ಮೆಂಟ್' ಕಾರ್ಯಕ್ರಮ ಆಯೋಜಿಸಲಾಗಿದೆ.

ಹೀಗಿದ್ದರೂ, 'ಓದುಗರಾಗಿ ಶಿಕ್ಷಕರು' ಉಪಕ್ರಮವು, ಓದುವ ಬಗ್ಗೆ ಶಿಕ್ಷಕರ ನಿಲುವಿನಲ್ಲಿ ದೀರ್ಘಕಾಲೀನ ಬದಲಾವಣೆಗಳನ್ನು ಸೃಷ್ಟಿಸುವ ಒಂದು ಮಹದಾಶಯವನ್ನು ಹೊಂದಿದೆ. ತನ್ಮೂಲಕ ಅಸಂಖ್ಯಾತ ವಿದ್ಯಾರ್ಥಿ ಸಮುದಾಯದಲ್ಲಿ ಓದುವ ಒಲವನ್ನು ಬೆಳೆಸುವ ಗಹನವಾದ ಸಾಧ್ಯತೆಯನ್ನು ಹೊಂದಿದೆ ಎಂಬ ನಂಬಿಕೆ ತಂಡದ್ದು.

❖



ಸಂಗ್ರಹ ಚಿತ್ರ